**ದಿನಾಂಕ 12.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

2ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಅರ್ಜಿದಾರರು ನನಗೆ ಸುಮಾರು 15 ವರ್ಷಗಳಿಂದ ಪರಿಚಯಸ್ಥರು. ಅಪಘಾತವಾದ ಸ್ಥಳದಲ್ಲಿ ಜನರು ಸೇರಿದ ಸಂದರ್ಭದಲ್ಲಿ ಸ್ಥಳಕ್ಕೆ ಹೋದಿರಾ ಎಂದರೆ ಸಾಕ್ಷಿಯು ನಮ್ಮ ಮನೆ ಎದುರಿಗೆ ಅಪಘಾತವಾಗಿದ್ದು, ಅದನ್ನು ನೋಡಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ.

ಅಪಘಾತದ ಬಗ್ಗೆ ನಾನು ದೂರು ನೀಡಿಲ್ಲ. ಸದರಿ ಹೇಳಿಕೆಯನ್ನು ನಾನು ಈ ದಿನ ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ದೂರು ನೀಡಲು ನನಗೆ ತೊಂದರೆ ಇರಲಿಲ್ಲ. ಅಪಘಾತದ ಬಗ್ಗೆ ದೂರನ್ನು ಯಾರು ಮತ್ತು ಯಾವಾಗ ನೀಡಿದರು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ನೋಡಿದ್ದಲ್ಲಿ ದೂರು ನೀಡಬಹುದಿತ್ತು ಎಂದರೆ ಸಾಕ್ಷಿಯು ಅವರ ಮನೆಯವರು ನೀಡಬಹುದು ಎಂದು ನಾನು ಸುಮ್ಮನಾದೆ ಎಂದು ನುಡಿಯುತ್ತಾರೆ. ಆಪಾದಿತ ವಾಹನದ ಚಾಲಕನನ್ನು ನೋಡಿರುತ್ತೇನೆ, ಆದರೆ ಹೆಸರು ಗೊತ್ತಿಲ್ಲ. ಆಪಾದಿತ ವಾಹನ ಯಾವ ಬಣ್ಣದ್ದು ಎಂದು ನನಗೆ ಗೊತ್ತಿಲ್ಲ, ಆದರೆ ಅದು ಎಲೆಕ್ಟ್ರಿಕ್ ವಾಹನ ಆಗಿರುತ್ತದೆ. ಅಪಘಾತವಾದ ಸುಮಾರು ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಆ ಸಂದರ್ಭದಲ್ಲಿ ನಾನು ಹಾಜರಿದ್ದೆ. ಅಪಘಾತವಾದಾಗ ಮತ್ತು ಪಂಚನಾಮೆಯ ಸಂದರ್ಭದಲ್ಲಿ ನಾನು

ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನದ ಮಾಲೀಕರು ನಮಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಅರ್ಜಿದಾರರು ನನಗೆ ಪರಿಚಯಸ್ಥರಾದ ಕಾರಣ ಅವರಿಗೆ ಪರಿಹಾರ ಸಿಗಲಿ ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**